ಒರಗಿಸಿಕೊಂಡು ಬೆನ್ನು ಸವರುತ್ತಿದ್ದದ್ದು ಕಾಣಿಸಿತು.

"ಚಪ್ಪಲಿ ತೆಗೆದಿಡು" ಬೇಗಮ್ ಜಾನ್‌ಳ ಪಕ್ಕೆ ಸವರುತ್ತ ರಬ್ಬು ನನಗೆ ಹೇಳಿದಳು. ಇಲಿಮರಿಯಂತೆ ನಾನು ನನ್ನ ರಜಾಯಿಯೊಳಗೆ ಮುದುಡಿಕೊಂಡೆ.

ಮತ್ತದೇ ವಿಚಿತ್ರ ಶಬ್ದ. ಕತ್ತಲಲ್ಲಿ ಬೇಗಮ್ ಜಾನ್‌ಳ ರಜಾಯಿ ಮತ್ತೆ ಆನೆಯಂತೆ ಅಲುಗಾಡಲಾರಂಭಿಸಿತು. "ಅಲ್ಲಾಹ್! ಆಹ್..." ನಾನು ಸಣ್ಣನೆಯ ದನಿಯಲ್ಲಿ ಉಸುರಿದೆ.

ರಜಾಯಿಯೊಳಗಿನ ಆನೆ ಮೇಲೆ ಹೋಗಿ ಕೆಳಗೆ ಕೂತಿತು. ನನ್ನ ಸ್ವರ ಉಡುಗಿತ್ತು. ಆನೆ ಮತ್ತೆ ಅಲ್ಲಾಡಲು ಶುರುವಾಯಿತು. ಭಯದಿಂದ ನಾನು ಮರಗಟ್ಟಿದೆ. ಆದರೆ, ಆ ರಾತ್ರಿ ಏನಾದರೂ ಸರಿ, ದೀಪವನ್ನು ಹಚ್ಚಿಯೇ ಬಿಡುವುದೆಂದು ನಿರ್ಧರಿಸಿಬಿಟ್ಟಿದ್ದೆ. ಮತ್ತೊಮ್ಮೆ ಆನೆಯ ಹೊಯ್ದಾಟ ಶುರುವಾಯಿತು, ಕೂರಲು ಪ್ರಯತ್ನಿಸುವಂತೆ ಕಾಣಿಸಿತು. ರುಚಿಯಾದ ಉಪ್ಪಿನಕಾಯಿಯನ್ನು ಯಾರೋ ಚಪ್ಪರಿಸಿದ ಸದ್ದು ಕೇಳಿಸಿತು. ಈಗ ನನಗೆ ಅರ್ಥವಾಯಿತು. ಹೊಟ್ಟೆಬಾಕಿ ರಬ್ಬು ಏನನ್ನೋ ಅಡಗಿಸಿ ತಿನ್ನುತ್ತಿರಬೇಕು! ಮೂಗನ್ನು ಅರಳಿಸಿ ಮೂಸಿ ನೋಡಿದೆ. ನನಗೆ ಬರೀ ಅತ್ತರ್, ಚಂದನ ಮತ್ತು ಮೆಹಂದಿಯ ಪರಿಮಳ ಬಂತು, ಬೇರೇನೂ ಇಲ್ಲ.

ಮತ್ತೊಮ್ಮೆ ರಜಾಯಿ ಅಲುಗಾಡತೊಡಗಿತು. ನಾನು ಅಲುಗಾಡದೆ ಮಲಗಲು ಪ್ರಯತ್ನಿಸಿದೆ. ಆದರೆ, ರಜಾಯಿ ಭಯಂಕರ ವಿಚಿತ್ರ ಆಕಾರ ತಾಳುವುದನ್ನು ನೋಡಿ ನಾನು ನಡುಗಿ ಬಿಟ್ಟೆ. ದೊಡ್ಡ ಕಪ್ಪೆಯೊಂದು ಶಬ್ದ ಮಾಡುತ್ತ ಗಾಳಿ ತುಂಬಿಸಿಕೊಂಡು ದೊಡ್ಡದಾಗಿ ನನ್ನ ಮೇಲೆ ಎಗರಿ ಬಿಡುತ್ತೇನೋ ಎಂದೆನಿಸಿತು.

"ಆ... ಅಮ್ಮಿ..." ಎಂದು ನಾನು ಅಳುಬುರುಕ ದನಿಯಲ್ಲಿ ಉಸುರಿದೆ. ಯಾರೂ ಕೇಳಲಿಲ್ಲ. ರಜಾಯಿ ನನ್ನ ತಲೆಯೊಳಗೆ ಹೋಗಿ ದೊಡ್ಡ ದೊಡ್ಡದಾಗಲು ಶುರುವಾಯಿತು. ಅಳುಕಿನಿಂದಲೇ ಹಾಸಿಗೆಯ ಇನ್ನೊಂದು ಬದಿಗೆ ಕಾಲು ಹಾಕಿದೆ, ಕತ್ತಲಲ್ಲಿ ತಡಕಾಡುತ್ತಾ ಸ್ವಿಚ್ಚು ಹುಡುಕಿ, ದೀಪ ಹತ್ತಿಸಿದೆ. ರಜಾಯಿಯೊಳಗಿನ ಆನೆ ಪಲ್ಟಿ ಹೊಡೆದು ರಜಾಯಿ ಕೂಡಲೇ ಪುಸ್ ಆಯಿತು. ಪಲ್ಟಿ ಹೊಡೆಯುತ್ತಿದ್ದಾಗ, ರಜಾಯಿ ಒಂದು ಬದಿಯಲ್ಲಿ ಸುಮಾರು ಒಂದು ಅಡಿಯಷ್ಟು ಮೇಲಕ್ಕೆ ಹೋಯಿತು...

ಅಯ್ಯೋ ದೇವರೇ! ನಾನು ಜೋರಾಗಿ ಉಸಿರೆಳೆದುಕೊಂಡವಳೇ ನನ್ನ ಹಾಸಿಗೆಯ ಒಳಗಡೆ ಮುದುರಿಕೊಂಡೆ.

(ರಜಾಯಿ: ಉತ್ತರ ಭಾರತದಲ್ಲಿ ಚಳಿಗಾಲದಲ್ಲಿ ಹೊದ್ದುಕೊಳ್ಳಲು ಬಳಸುವ ಹತ್ತಿ ತುಂಬಿಸಿದ ಸಾಕಷ್ಟು ದಪ್ಪನೆಯ ಹಾಸಿಗೆ. ಇದಕ್ಕೆ ಹತ್ತಿ ಬಟ್ಟೆಯ ಬೆಳ್ಳಗಿನ ಒಂದು ಕವರ್ ಸಹ ಇರುತ್ತದೆ)

**ಇಸ್ಮತ್ ಚುಗ್ತಾಯಿ**



ಉರ್ದು ಸಾಹಿತ್ಯದ ಪ್ರಮುಖ ಬರಹಗಾರ್ತಿ. ಉತ್ತರಪ್ರದೇಶದ ಬದಯುನ್‌ನಲ್ಲಿ ಜನಿಸಿದರು. ಮಧ್ಯಮ ವರ್ಗದ ಮುಸ್ಲಿಂ ಮಹಿಳೆಯರ ತೊಳಲಾಟಗಳ ಬಗ್ಗೆ, ಸ್ತ್ರೀ ಲೈಂಗಿಕತೆಯ ಬಗ್ಗೆ ವಸ್ತುನಿಷ್ಠವಾಗಿ ಬರೆದಿದ್ದಾರೆ. ಇಲ್ಲಿ ಪ್ರಕಟವಾದ 'ರಜಾಯಿ' ಅವರ ಪ್ರಮುಖ ಕತೆಗಳಲ್ಲಿ ಒಂದು.

**ಶೀಲಾ ಪೈ**



ಮೂಲತಃ ಉಡುಪಿಯವರು. ಮೆಡಿಕಲ್ ಮೈಕ್ರೋ ಬಯಾಲಜಿಯಲ್ಲಿ ಸ್ನಾತಕೋತ್ತರ ಪದವೀಧರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲಸಿದ್ದಾರೆ. ಪ್ರಬಂಧಗಳು ಹಾಗೂ ಸಣ್ಣಕತೆಗಳನ್ನು ಬರೆಯುತ್ತಾರೆ.